## ಕೇಂದ್ರ ಅನುದಾನ

ನೋಂದಾಯಿಸಿದ ಸರ್ಕಾರ ಮತ್ತು ಸರ್ಕಾರೇತರ ಸಂಸ್ಥೆಗಳಿಗೆ (ಕಾಲೇಜುಗಳು, ಗ್ರಂಥಾಲಯ, ಮ್ಯೂಸಿಯಂಗಳಿಗೆ,ವಿಶ್ವವಿದ್ಯಾಲಯಗಳು ಮತ್ತು ಖಾಸಗಿ ವ್ಯಕ್ತಿಗಳಿಗೆ) ಹಸ್ತಪ್ರತಿ, ಅಪರೂಪದ ದಾಖಲೆ ಮತ್ತು ಪುಸ್ತಕಗಳನ್ನು ಸಂರಕ್ಷಿಸಲು ಕೇಂದ್ರ ಪತ್ರಾಗಾರ, ನವದೆಹಲಿ, ಅವರು ಆರ್ಥಿಕ ಅನುದಾನ ನೀಡುವ ಯೋಜನೆಯಿದೆ. ಅರ್ಜಿ ಮತ್ತು ವಿವರಗಳಿಗಾಗಿ ರಾಜ್ಯ ಪತ್ರಾಗಾರ ಇಲಾಖೆಯ ನೋಡಲ್ ಅಧಿಕಾರಿ: **ಶ್ರೀ ನೆಲ್ಲುಕುದ್ರಿ ಸದಾನಂದಪ್ಪ,** ಸಹ ಪತ್ರಪಾಲಕರು, ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ಕೊಠಡಿ ಸಂಖ್ಯೆ:17, ಪರಿವೀಕ್ಷಣೆ ಶಾಖೆ, ನೆಲಮಹಡಿ, ವಿಕಾಸಸೌಧ, ಬೆಂಗಳೂರು –560001 [ದೂರವಾಣಿ ಸಂ: (080) 22034483] ಇವರನ್ನು ಸಂಪರ್ಕಿಸಬಹುದು.

[**ವಿಶೇಷ ಸೂಚನೆ:** ಅರ್ಹ ಅರ್ಜಿದಾರರ ಅರ್ಜಿಯನ್ನು ಕೇಂದ್ರ ಸರ್ಕಾರದ ರಾಷ್ಟ್ರೀಯ ಪತ್ರಾಗಾರ, ನವದೆಹಲಿಗೆ ಶಿಫಾರಸ್ಸು ಮಾಡಬೇಕಾಗಿರುವುದರಿಂದ, ಅವಶ್ಯಕವಿರುವ ನಮೂನೆ ಇತ್ಯಾದಿಗಳನ್ನು http://nationalarchives.nic.in/ ಈ ಅಂತರ್ಜಾಲದಿಂದ ಪಡೆಯಬಹುದಾಗಿದೆ. ನಿಗದಿತ ದಿನಾಂಕದ ನಂತರ ಬರುವ ಅರ್ಜಿಗಳನ್ನು ಪರಿಗಣಿಸುವುದಿಲ್ಲ.]

## ರಾಷ್ಟ್ರೀಯ ಪತ್ರಾಗಾರ ನವದೆಹಲಿಯಿಂದ ಧನ ಸಹಾಯ ಪಡೆಯುವ ಕಾರ್ಯಕ್ರಮ

ಐತಿಹಾಸಿಕ ದಾಖಲೆಗಳು, ಅಮೂಲ್ಯ ಪುಸ್ತಕಗಳು, ಐತಿಹಾಸಿಕ ಛಾಯಾಚಿತ್ರಗಳು ಮೊದಲಾದ ದಾಖಲೆಗಳ ಸಂಗ್ರಹ ಅವುಗಳ ಸಂರಕ್ಷಣೆ ಹಾಗೂ ಪ್ರಕಟಣೆ ಕಾರ್ಯದಲ್ಲಿ ತೊಡಗಿರುವ ರಾಜ್ಯದ ನೊಂದಾಯಿತ ಸ್ವಯಂ ಸಂಘ ಸಂಸ್ಥೆಗಳು, ವ್ಯಕ್ತಿಗಳು ಹಾಗೂ ಡೀಮ್ಡ್ ವಿಶ್ವವಿದ್ಯಾಲಯಗಳಿಗೆ 75:25ರ ಅನುಪಾತದಲ್ಲಿ ರಾಷ್ಟ್ರೀಯ ಪತ್ರಾಗಾರ ನವದೆಹಲಿ, ನೀಡುವ ಧನ ಸಹಾಯವನ್ನು ಪಡೆಯಲು ಇಲಾಖೆಯಿಂದ ಸಂಸ್ಥೆಗಳನ್ನು ಶಿಫಾರಸ್ಸು ಮಾಡಲಾಗುವುದು.

2015–16ನೇ ಸಾಲಿಗೆ ಈ ಯೋಜನೆಯಡಿ ಧನ ಸಹಾಯ ಪಡೆದ ಸಂಘ–ಸಂಸ್ಥೆಗಳು.

1. ಸಂಸ್ಕೃತ ಸಂಶೋಧನಾ ಸಂಸತ್, ಮೇಲುಕೋಟೆ, ಮಂಡ್ಯ ಜಿಲ್ಲೆ.
2. ಬಸವ ಸಮಿತಿ, ಬಸವ ಭವನ, ಬೆಂಗಳೂರು.
3. ಕರುಣಾಮಯ ಯುವಕ ಸಂಘ, ಬೀದರ್.
4. ಗಾಂಧಿಭವನ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಬೆಂಗಳೂರು.